V (c) ಸೆಕೆಂಡ್ ಗ್ರೇಡ್ ಪ್ಲೀಡರ್ ಪರೀಕ್ಷೆಗೆ ಹಾಜರಾಗಿ ಫಸ್ಟ್ ಗ್ರೇಡ್ ಪ್ಲೀಡರಾಗುವದಕ್ಕೆ ಅವಶ್ಯಕವಾದ ಸಂಖೆಯ ಮಾರ್ಕು ಗಳನ್ನು ಪಡೆಯುವ ಯಾವ ವ್ಯಾವೇದವಾರನಿಗಾಗಲಿ, ಅವನು ಅನ್ಯಥಾ ಅರ್ಹನಾಗಿದ್ದು ಮತ್ತು XIನೇ ರೂಲಿನಲ್ಲಿ ವಿಧಿಸಲ್ಪಟ್ಟಂತೆ ಜಾಸ್ತಿ ಫೀ ಯನ್ನು ಪಾವತೀ ಮಾಡಿದ ತರುವಾಯ, ಫಸ್ಟ್ ಗ್ರೇಡಿನ ಸರಟಿಫಿಕೇಟ್ ಕೊಡಲ್ಪಡುವದು.

(d) ಫಸ್ಟ್ ಗ್ರೇಡ್ ಪ್ಲೀಡರ್ ಪರೀಕ್ಷೆಗೆ ಹಾಜರಾಗಿ 2ನೇ ಗ್ರೇಡಿಗೆ ಮಾತ್ರವೇ ಅರ್ಹನಾಗುವ ಯಾವ ವ್ಯಾವೇದವಾರನಿಗಾಗಲಿ ಸೆಕೆಂಡ್ ಗ್ರೇಡಿನ ಸರಟಿಫಿಕೇಟ್ ಕೊಡಲ್ಪಡುವದು.

ತಾರೀಖು 12ನೇ ಮಾರ್ಚೀ 1883.

ನಂ. 84.—ಕಾರ್ಯಾರ್ಥ ದಿವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮ ಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬ್ಯೆ ಹಿಂದಿನ ದಿನ ಸೆಕ್ರಿಟೇರಿಯವರಿಗೆ ತಮ್ಮ ಕಾರ್ಡಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಹುಕ್ಕುಂ ಜನೋಜೀಬ್,
ಆರ್. ವಿಜಯೀಂದ್ರರಾವ್,
ಸೆಕ್ರಿಟೇರಿ.

ಪೊಲೀಸ್ ಇಲಾಖಾ.

ಇಸ್ತಿಹಾರ್‌ನಾಮೆಗಳು.

ನಂ. 163—20. ತಾರೀಖು 27ನೇ ಮೇ 1885.

ತುಮಕೂರು ಡಿಸ್ಟ್ರಿಕ್ಟ್ ಪೊಲೀಸ್ ಆ॥ ಕಮ್ಮಿಷನರ್ ಮೆ॥ ಮಹಮ್ಮದ್ ಆಲ್ಲಿಯವರಿಗೆ ಬರುವ ತಿಂಗಳ ಗುರ್ರೆ ಯಾ ಅವರು ವ್ಯಾಪ ಸಯೋಗಿಸಿಕೊಳ್ಳುವ ತಾರೀಖು ಲಾಗಾಯಿತು 15 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ರಜಾದ ಮೇಲೆ ಅವರು ಗೈರ್ ಹಾಜರು ಇರುವ ಕಾಲದಲ್ಲಿ ಜನರಲ್ ಆ॥ ಕಮ್ಮಿಷನರ್ ಮೆ॥ ಬಿ. ಜೆ. ಕೃಷ್ಣಯ್ಯಂಗಾರ್ರು ತಮ್ಮ ಸ್ವಂತ ಕೆಲಸಗಳಲ್ಲದೆ ಇಲಾಖೆಯ ಚಾರ್ಜನ್ನು ಸಹ ವಹಿಸತಕ್ಕದ್ದು.

ನಂ. 185—23. ತಾರೀಖು 1ನೇ ಜೂ೯ 1885.

ಹೆಗ್ಗಡ ದೇವನಕೋಟೆ ತಾಲ್ಲೂಕು ಹೊಸಹಳ್ಳಿ ವಾಸಸ್ಥನಾದ ಕೆಂಪಯ್ಯನೆಂಬುವನು ಅದೇ ತಾಲ್ಲೂಕು ಕೊಳಗಳ ಗ್ರಾಮದ ಶಾನುಭೋಗ ಕೇವಯ್ಯ ಯಂಬವನನ್ನು ಖೂನಮಾಡಿ ಫರಾರಿಯಾಗಿರುವದರಿಂದ ಸದರೀ ಕೆಂಪಯ್ಯನ ದಸ್ತಗಿರೀ ಬ್ಯೆ ಅಥವಾ ದಸ್ತಗಿರಿಗೆ ಸಾಧಕವಾದ ಬಾತಮಿಯನ್ನು ಕೊಡುವ ಬ್ಯೆ 50 ರೂಪಾಯಿಗಳ ಇನಾಮು ಕೊಡಲ್ಪಡುವದು.

ಸದರೀಯವನ ಚಹರೆಪಟ್ಟಿಯು ಇದರಡಿ ಕಂಡಂತೆ ಇರುತ್ತೆ:—

ಹೆಸರು—ಕೆಂಪಯ್ಯ, ತಂದೆಹೆಸರು—ಲಿಂಗೇಗೌಡ, ಜಾತಿ—ಶಿವಾಚಾರ ವಕ್ಕಲಿಗ, ವಯಸ್ಸು—ಸುಮಾರು 25 ವರುಷ, ವಾಸಸ್ಥಳ—ಹೆಗ್ಗಡದೇವನಕೋಟೆ ತಾಲ್ಲೂಕು ಹೊಸಹಳ್ಳಿಯಲ್ಲಿ ಆಖೈರಿಗೆ ವಾಸವಾಗಿದ್ದದ್ದು.

ಹೆಗ್ಗುರ್ತುಗಳು—ಆಳು ಉದ್ದನಾಗಿಧಾನೆ; ಕಪ್ಪುವರ್ಣ; ಸಂಣ ಮಿಾಸೇ; ದಾರದಲ್ಲಿ ಪೋಣಿಸಿದ ಒಂದು ಬೆಳ್ಳಿ ಕರಡಿಗೆ ಹಾಕಿಕೊಂಡಿ ಧಾನೆ. ತರಫಿನ ಯರಡು ಖಿಡಕುಗಳು, ಯಡಕಿವಿಯಲ್ಲಿ ಒಂದು ತಟ್ಟುಮುರು ಈ ಆಭರಣಗಳು ಮೈ ಮೇಲೆ ಇರುತ್ತೆ.

ಯಸ್. ವೆಂಕಟವರದಯ್ಯಂಗಾರ್,
ಅ॥ ಸೆಕ್ರಿಟೇರಿ.